ಅ) ಈ ಕೆರೆಗಳಲ್ಲಿ ಹೂಳನ್ನು ಎತ್ತಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಒಟ್ಟು 1011 ಸಣ್ಣ ನೀರಾವರಿ ಕೆರೆಗಳಿದ್ದು ಅವುಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿವೆ.

ಸಂ.	ತಾಲ್ಲೂಕು	ಸಣ್ಣ ನೀರಾವರಿ ಕೆರೆಗಳ ಸಂಖ್ಯೆ
1.	ಧಾರವಾಡ	174
2.	ಹುಬ್ಬಳ್ಳಿ	44
3.	ಕಲಘಟಗಿ	778
4.	ಕುಂದಗೋಳ	15
	ಒಟ್ಟು	**1011**

ಆ) 1999-2000ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಆರು ಕೆರೆಗಳಿಂದ ಲೆಕ್ಕ ಶೀರ್ಷಿಕೆ 4702 ಕೆರೆಗಳ ಹೂಳೆತ್ತುವುದು. (ರೈತರ ಸಹಯೋಗ) ದಿಂದ ಶೇಕಡಾ 30ರಷ್ಟು ಅನುದಾನದೊಂದಿಗೆ ಹೂಳು ತೆಗೆಯುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

1. ರೈತರ ಸಹಯೋಗದಿಂದ ಹೂಳು ತೆಗೆಯುವ ಕಾರ್ಯಯೋಜನೆ ಚಾರಿಯಲ್ಲಿದೆ.
2. 1000-00 ಕೋಟಿ ರೂ.ಗಳ ವಿಶ್ವಬ್ಯಾಂಕ್ ನೆರವಿನ ಯೋಜನೆ ಸಹ ರೂಪಿಸಲಾಗಿದೆ.

ಹುಬ್ಬಳ್ಳಿ – ಧಾರವಾಡದಲ್ಲಿ ಪೊಲೀಸ್ ಸಿಬ್ಬಂದಿಗಳ ವರ್ಗಾವರ್ಗಿ

788 - ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕಳೆದ 5 ವರ್ಷಗಳಿಂದಲೂ ಸತತವಾಗಿ ಸೇವೆ ಸಲ್ಲಿಸುತ್ತಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳೆಷ್ಟು? (ಪೂರ್ಣ ವಿವರ)

ಆ) ಒಂದೇ ಸ್ಥಳದಲ್ಲಿ ಸುದೀರ್ಘ ಕಾಲ ಸೇವೆ ಸಲ್ಲಿಸಲು ಕಾರಣಗಳೇನು?

ಇ) ಸರ್ಕಾರದ ನೀತಿಯಂತೆ ಪ್ರತಿ 3 ವರ್ಷಕ್ಕೊಮ್ಮೆ ವರ್ಗಾವರ್ಗಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಈ ಕೆಳಕಂಡ ಪೊಲೀಸ್ ಸಿಬ್ಬಂದಿ ವರ್ಗದವರು ಹುಬ್ಬಳ್ಳಿ-ಧಾರವಾಡ

ಕಮೀಷನರೇಟ್‌ನಲ್ಲಿ ಸತತವಾಗಿ 5 ವರ್ಷದಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

1.	ಸಶಸ್ತ್ರ ನಿರೀಕ್ಷಕರು	1
2.	ಆರಕ್ಷಕ ನಿರೀಕ್ಷಕರು	13
3.	ಆರಕ್ಷಕ ಉಪನಿರೀಕ್ಷಕರು	16
4.	ಮಹಿಳಾ ಪೊಲೀಸ್ ಉಪನಿರೀಕ್ಷಕರು	1
5.	ಸಹಾಯಕ ಆರಕ್ಷಕ ಉಪನಿರೀಕ್ಷಕರು	32
6.	ಮಹಿಳಾ ಸಹಾಯಕ ಆರಕ್ಷಕ ಉಪ ನಿರೀಕ್ಷಕರು	1
7.	ನಾಗರೀಕ ಮುಖ್ಯ ಪೇದೆಗಳು	182
8.	ಮಹಿಳಾ ಮುಖ್ಯ ಪೇದೆಗಳು	6
9.	ಪೊಲೀಸ್ ಕಾನ್ಸ್‌ಟೇಬಲ್ಸ್	597
10.	ಮಹಿಳಾ ಪೇದೆಗಳು	32

ಅ) ಹುಬ್ಬಳ್ಳಿ-ಧಾರವಾಡ ಕಮೀಷನರೇಟ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯಿಂದ ಸಹಾಯಕ ಪಿ.ಎಸ್.ಐ. ಹುದ್ದೆಯವರೆಗಿನ ಸಿಬ್ಬಂದಿ ಅದೇ ಘಟಕದ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗಿರುತ್ತದೆ. ಉಳಿದ ವರ್ಗದ ಸಿಬ್ಬಂದಿ ವರ್ಗದವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವರ್ಗ ಮಾಡುವುದು ಅವಶ್ಯಕವೆಂದು ಕಂಡುಬಂದಾಗ ಅಂತಹ ಪ್ರಕರಣಗಳಲ್ಲಿ ವರ್ಗಾವಣೆ ಮಾಡಲಾಗುವುದು.

ರಾಜ್ಯದಲ್ಲಿರುವ ಡಿಸ್ಟಿಲರೀಸ್

791 - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಡಿಸ್ಟಿಲರೀಸ್ ಕಾರ್ಖಾನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಪ್ರತಿನಿತ್ಯ ಡಿಸ್ಟಿಲರೀಸ್ ಕಾರ್ಖಾನೆಯಿಂದ ಉತ್ಪಾದನೆಯಾಗುವ ಮದ್ಯದ ಪ್ರಮಾಣವೆಷ್ಟು?

ಆ) ಸರ್ಕಾರ ಸೆಕೆಂಡ್ಸ್ ವಹಿವಾಟನ್ನು (ವ್ಯಾಪಾರ) ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಸಾರಾಯಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿಯ ಮೊತ್ತ ಎಷ್ಟು? (ಗುತ್ತಿಗೆದಾರರ ಬಾಕಿ ಹಣದ ಮೊತ್ತ ಹೆಸರು ಮತ್ತು ವಿಳಾಸ ನೀಡುವುದು).

ಗುತ್ತಿಗೆದಾರರ ಬಡ್ಡಿ ಮನ್ನಾ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?